# ಚವ್ವೀಸ ತೀರ್ಥಂಕರರ ಮಂಗಲ

ಜಯ ಮಂಗಳಂ ಸದಾ ಶುಭ ಮಂಗಳಂ | ಜಯ ಚತುರ್ವಿಂಶತಿ ಮಹಾ ಜಿನರಿಗೆ||ಪ||

ಇಂದ್ರ ಶತವಂದ್ಯ ಶ್ರೀ ವೃಷಭ ಜಿನರಾಜನಿಗೆ, ಚಂದ್ರಾರ್ಕ ತನುಜೇತ ಅಜಿತ ಜಿನಗೆ|
ಮಂದರಾಗ್ರದಿನಿಂದ ಶಂಭವ ಜಿನೇಶ್ವರಗೆ, ಕಂದರ್ಪ ವಿಜಯ ಅಭಿನಂದನರಿಗೆ ||೧||

ಅಮರ ವಂದಿತನಾದ ಸುಮತಿ ಶ್ರೀಜಿನಪತಿಗೆ, ಅಮಿತಗುಣಿ ಪದ್ಮ ಪ್ರಬೇಶ್ವರನಿಗೆ|
ಸುಮನ ಸಾರಾಬ್ಜಸುಪಾರ್ಶ್ವ ಜಿನಪತಿಗೆ, ಮಮದೇವನಾದ ಶ್ರೀ ಚಂದ್ರಜಿನಗೆ ||೨||

ಪುಷ್ಪಸಾಯಕ ವಿಜಯ ಪುಷ್ಪದಂತೇಶ್ವರಗೆ, ನಿಷ್ಪನ್ನಹೃದಯ ಶೀತಳ ಜಿನರಿಗೆ|
ಒಪ್ಪುತಿಹ ಶ್ರೇಯಾಂಸ ವಾಸುಪೂಜ್ಯೇಶ್ವರಗೆ, ದರ್ಪಕಾರಾತಿ ಶ್ರೀವಿಮಲ ಜಿನಗೆ ||೩||

ಅಂತಕಾಂತಕನೆನಿಪನಂತ ಶ್ರೀ ಜಿನಪತಿಗೆ, ಕಂತುಮದಹರ ದರ್ಮ - ಶಾಂತಿ ಜಿನರಿಗೆ|
ಕುಂಥು, ಅರ, ಮಲ್ಲಿ, ಮುನಿಸುವ್ರತಗೆ, ನಮಿ ಜಿನಗೆ, ಚಿಂತಿತಾರ್ಥವನೀವ ನೇಮಿ ಜಿನಗೆ||೪||

ಪರಮ ಶ್ರೀ ಪಾರ್ಶ್ವಜಿನ, ಮತಿಮಹಾವೀರನಿಗೆ, ಧರೆಗೆ ಬೆಳ್ಗುಳದ ಭಂಡಾರಿ ಗೃಹದ|
ಹರಿ ಪೀಠದೊಳು ನೆಲಸಿರ್ಪ ಪಂಡಿತಾಚಾರ್ಯರಿಗೆ, ನಿರುತ ಸುಖವೀವ ಚವ್ವೀಸ ಜಿನರಿಗೆ||೫||